## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಬೆಂಗಳೂರು ನಗರದ ವೈಯಾಲಿಕಾವಲ್ ಪೊಲೀಸ್ ಠಾಣೆ ಮೊ ಸಂ: 122/2024, ಕಲಂ:3(1)(r), 3(1)(s), 3(1)(u), 3(2)(Va) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ(ದೌರ್ಜನ್ಯ ತಡೆ) ಕಾಯಿದೆ, 1989 ಮತ್ತು ಕಲಂ 153A(1)(a)(b), 504, 506 ಐಪಿಸಿ ಪ್ರಕರಣದಲ್ಲಿ ಆರೋಪಿತನ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಸರ್ಕಾರದ ಪೂರ್ವಾನುಮತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**
1. ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಕರ್ನಾಟಕ, ಬೆಂಗಳೂರು ರವರ ಪತ್ರ ಸಂಖ್ಯೆ: ಅಪರಾಧ(1) 2017/ಬೆಂ.ನ/2024, ದಿನಾಂಕ:31.01.2025.
2. ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 30 ಎಮ್‌ಹೆಚ್‌ಬಿ 2025, ದಿನಾಂಕ:24.02.2025.
3. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ ರವರ ಪತ್ರ ಸಂಖ್ಯೆ: ಕವಿಸಸ/ಶಾರಶಾ/35/ಅ.ಮ/2024-25, ದಿನಾಂಕ:19.04.2025.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:31.01.2025ರ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ, ಬೆಂಗಳೂರು ರವರ ಪ್ರಸ್ತಾವನೆಯಲ್ಲಿ, ಬೆಂಗಳೂರು ನಗರದ ವೈಯಾಲಿಕಾವಲ್ ಪೊಲೀಸ್ ಠಾಣೆ ಮೊ ಸಂ: 122/2024, ಕಲಂ:3(1)(r), 3(1)(s), 3(1)(u), 3(2)(Va) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ(ದೌರ್ಜನ್ಯ ತಡೆ) ಕಾಯಿದೆ, 1989 ಮತ್ತು ಕಲಂ 153A(1)(a)(b), 504, 506 ಐಪಿಸಿ ಪ್ರಕರಣದ ಆರೋಪಿ ಮುನಿರತ್ನ ರವರು ಬೆಂಗಳೂರು ನಗರದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ-154ರ ಹಾಲಿ ಶಾಸಕರಾಗಿದ್ದು, ಇವರು ಬೆಂಗಳೂರು ನಗರ ವೈಯಾಲಿಕಾವಲ್ ಪೊಲೀಸ್ ಠಾಣಾ ಸರಹದ್ದಿನ 11ನೇ ಎ ಕ್ರಾಸ್‌ನ ನಂ.147/149 ರಲ್ಲಿ ಸ್ವಂತ ಮನೆ ಇದ್ದು, ಇದರಲ್ಲಿ ಶಾಸಕರ ಗೃಹ ಕಛೇರಿಯನ್ನು ಹೊಂದಿರುತ್ತಾರೆ. ಈ ಗೃಹ ಕಛೇರಿಯಲ್ಲಿ ಒಟ್ಟು ಎರಡು ಸಭೆ ನಡೆಸುವ ಕೊಠಡಿಗಳಿರುತ್ತವೆ. ಈ ಗೃಹ ಕಛೇರಿಯ ಹಿಂಬದಿ ಸುಮಾರು 150-200 ಜನರನ್ನು ಸೇರಿಸಿ ಸಭೆ ನಡೆಸುವ ಸ್ಥಳವಿರುತ್ತದೆ. ಸದರಿ ಆರೋಪಿ ಶಾಸಕರಾದ ಮುನಿರತ್ನ ಇವರು ಕಮ್ಮಾರ ನಾಯ್ಡು ಜಾತಿಗೆ ಸೇರಿದವರಾಗಿದ್ದು, ತಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸುವ ಮತ್ತು ತಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಿಬಿಎಂಪಿ, ಇತರೆ ಸರ್ಕಾರಿ ಕಛೇರಿಯ ಅಧಿಕಾರಿಗಳ ಸಭೆ ನಡೆಸಲಾಗುತ್ತಿರುತ್ತದೆ.

ಪ್ರಕರಣದ ಪಿರ್ಯಾದುದಾರರಾದ ಸಾಕ್ಷಿ-1 ಶ್ರೀ ವೇಲುನಾಯಕರ್ ರವರು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲಕ್ಷ್ಮೀದೇವಿನಗರ ವಾರ್ಡ್-42 ನ ಮಾಜಿ ಕಾರ್ಪೋರೇಟರ್ ಆಗಿದ್ದು, ಜೊತೆಯಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಹಾಗೂ ಸಮಾಜಸೇವೆ ಮಾಡಿಕೊಂಡಿರುತ್ತಾರೆ. ಇವರು ಆದಿ ದ್ರಾವಿಡ (ಎಸ್.ಸಿ.) ಜಾತಿಗೆ ಸೇರಿದವರಾಗಿರುತ್ತಾರೆ.

ಈ ಪ್ರಕರಣದಲ್ಲಿ ಸಾಕ್ಷಿ-4 ಚೆಲುವರಾಜು ರವರು ಬೆಂಗಳೂರು ನಗರದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ-154 ರ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಲಕ್ಷ್ಮಿದೇವಿನಗರದ ವಾರ್ಡ್-42 ರಲ್ಲಿ ಘನತ್ಯಾಜ್ಯ ಸಂಗ್ರಹದ ಕಸ ವಿಲೇವಾರಿ ಮಾಡುವ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿರುತ್ತಾರೆ.

ಆರೋಪಿ ಮುನಿರತ್ನ, ಸಾಕ್ಷಿ-01 ವೇಲುನಾಯಕರ್ ಮತ್ತು ಸಾಕ್ಷಿ-4 ಚೆಲುವರಾಜು ಇವರುಗಳು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕ್ರಮವಾಗಿ ಶಾಸಕ, ಮಾಜಿ ಕಾರ್ಪೊರೇಟರ್ ಮತ್ತು ಗುತ್ತಿಗೆದಾರರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸಾಕ್ಷಿ-01 ವೇಲುನಾಯಕರ್ ರವರು ಆರೋಪಿ ಕ್ಷೇತ್ರದ ವ್ಯಾಪ್ತಿಯಲ್ಲಿ ಆರೋಪಿಯ ಜೊತೆ ಆತ್ಮೀಯರಾಗಿ ಗುರುತಿಸಿಕೊಂಡು ಅವರ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. 2023ನೇ ವಿಧಾನಸಭಾ ಚುನಾವಣೆಯಲ್ಲಿ ಲಕ್ಷ್ಮೀದೇವಿನಗರ ವಾರ್ಡ್-42 ರಲ್ಲಿ, ಆರೋಪಿ ಮುನಿರತ್ನ ರವರಿಗೆ ಕಡಿಮೆ ಮತಗಳು ದಾಖಲಾಗಿರುವ ಬಗ್ಗೆ ಆರೋಪಿ ಮುನಿರತ್ನ ರವರು ಸಾಕ್ಷಿ-01 ರವರಾದ ವೇಲುನಾಯಕರ್ ರವರು ತನ್ನ ವಿರುದ್ಧ ಕೆಲಸ ಮಾಡಿರುತ್ತಾನೆಂದು ಅವರ ಜೊತೆ ಮನಸ್ತಾಪವುಂಟಾಗಿರುತ್ತದೆ. ಇದೇ ವಿಧಾನಸಭಾ ಕ್ಷೇತ್ರದ ಲಕ್ಷ್ಮೀದೇವಿನಗರ ವಾರ್ಡ್-42 ರಲ್ಲಿ ಘನತ್ಯಾಜ್ಯ ಕಸ ವಿಲೇವಾರಿ ಗುತ್ತಿಗೆ ಕಾಮಗಾರಿ ಮಾಡುತ್ತಿದ್ದ ಸಾಕ್ಷಿ-4 ಚೆಲುವರಾಜು ರವರಿಗೆ ಆರೋಪಿ ಮುನಿರತ್ನ ರವರು ಗುತ್ತಿಗೆಯ ಸಂಬಂಧ ಪ್ರತಿ ತಿಂಗಳು ಕಮಿಷನ್ ಹಣ ಕೊಡಬೇಕೆಂದು ಪೀಡಿಸುತ್ತಿದ್ದು, ಈ ವಿಚಾರವನ್ನು ಸಾಕ್ಷಿ-1 ವೇಲುನಾಯಕರ್ ರವರ ಬಳಿ ಸಾಕ್ಷಿ-4 ಚೆಲುವರಾಜು ರವರು ಹೇಳಿಕೊಂಡಾಗ, ಸಾಕ್ಷಿ-1 ರವರು ಕಮಿಷನ್ ಹಣವನ್ನು ಆರೋಪಿ ಶಾಸಕ ಮುನಿರತ್ನ ರವರಿಗೆ ಕೊಡದಂತೆ ತಡೆದಿರುತ್ತಾರೆ. ಇದರಿಂದ ಆರೋಪಿ ಮುನಿರತ್ನ ರವರಿಗೆ ಸಾಕ್ಷಿ-1 ವೇಲುನಾಯಕರ್ ರವರ ವಿರುದ್ಧ ದ್ವೇಷವುಂಟಾಗಿರುತ್ತದೆ. ನಂತರ ಆರೋಪಿ ಮುನಿರತ್ನ ರವರು ಸಾಕ್ಷಿ-4 ಚೆಲುವರಾಜು ರವರಿಗೆ 'ನೀನು ವೇಲುನಾಯಕರ್ ಜೊತೆ ಸೇರಬೇಡ ಎಂದು ಅವಾಚ್ಯ ಶಬ್ದ ಉಪಯೋಗಿಸಿ, ನೀನು ಬಾಕಿಯಿರಿಸಿಕೊಂಡಿರುವ 36 ತಿಂಗಳ ಕಮಿಷನ್ ಹಣವನ್ನು ತಂದು ಕೊಡು' ಎಂದು ಪದೇ ಪದೇ ಪೀಡಿಸುತ್ತಿರುತ್ತಾರೆ. ಸಾಕ್ಷಿ-4 ಚೆಲುವರಾಜು ರವರು ಆರೋಪಿ ಮುನಿರತ್ನ ರವರ ವಾರ್ಡ್‌ಗೆ ಭೇಟಿ ನೀಡಿದಾಗ ಹಾಗೂ ಅವರ ಗೃಹ ಕಛೇರಿಯಲ್ಲಿ ಭೇಟಿಯಾದಾಗ ಸದರಿ ಆರೋಪಿ ಶಾಸಕರು ಸಾಕ್ಷಿ-01 ವೇಲುನಾಯಕರ್ ರವರ ಹೆಸರನ್ನು ಒಮ್ಮೆ ಉಲ್ಲೇಖಿಸಿ ಮತ್ತೊಮ್ಮೆ ಉಲ್ಲೇಖಿಸದೇ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುತ್ತಾರೆ.

ಈ ಪ್ರಕರಣದಲ್ಲಿನ ಆರೋಪಿ ಶಾಸಕರಾದ ಮುನಿರತ್ನ ರವರು, ಸಾಕ್ಷಿ-4 ಚೆಲುವರಾಜು ರವರು ಗುತ್ತಿಗೆ ಕಮಿಷನ್ ಹಣ ಕೊಡದೇ ಇದ್ದುದರಿಂದ ತಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುತ್ತಿಗೆದಾರರುಗಳಾದ ಸಾಕ್ಷಿ-30 ಶ್ರೀ ಟಿ. ಚಂದ್ರಶೇಖರ್ ರೆಡ್ಡಿ, ಸಾಕ್ಷಿ-31 ಶ್ರೀ ವಾಸು ಹೆಚ್.ಬಿ, ಸಾಕ್ಷಿ-32 ಶ್ರೀ ನರೇಶ್ ಎನ್., ಸಾಕ್ಷಿ-33 ಶ್ರೀ ಮಾರುತಿ ಬಿ, ಸಾಕ್ಷಿ-34 ಶ್ರೀ ಸತೀಶ್ ಜಿ. ಮತ್ತು ಸಾಕ್ಷಿ-33 ಶ್ರೀ ಮಾಯಣ್ಣಗೌಡ ಜೊತೆಯಲ್ಲಿ ಗುತ್ತಿಗೆದಾರರಾದ ಸಾಕ್ಷಿ-4 ಚೆಲುವರಾಜು ರವರನ್ನೂ ಸೇರಿ ಕಸ ವಿಲೇವಾರಿ ಮಾಡುವ ಇತರೆ ಎಲ್ಲಾ ಗುತ್ತಿಗೆದಾರರುಗಳನ್ನು ಒಳಗೊಂಡಂತೆ, ದಿನಾಂಕ:18.05.2024 ರಂದು ತಮ್ಮ ಗೃಹ ಕಛೇರಿಯಲ್ಲಿ ಸಭೆಗೆ ಹಾಜರಾಗುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಸಾಕ್ಷಿ-15 ವರನಾರಾಯಣ ರವರಿಗೆ ತಿಳಿಸಿದ್ದು, ಅದರಂತೆ ಸಾಕ್ಷಿ-4 ರವರನ್ನೂ ಸೇರಿ ಎಲ್ಲಾ ಗುತ್ತಿಗೆದಾರರಿಗೆ ಆರೋಪಿ ಶಾಸಕರ ಗೃಹ ಕಛೇರಿಯಲ್ಲಿ ಸಭೆಗೆ ಹಾಜರಾಗುವಂತೆ ಸಾಕ್ಷಿ-15 ರವರು ತಿಳಿಸಿರುತ್ತಾರೆ.

ಆ ಪ್ರಕಾರವಾಗಿ ದಿನಾಂಕ:18.05.2024 ರಂದು ಬೆಂಗಳೂರು ನಗರ ವೈಯಾಲಿಕಾವಲ್ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ಆರೋಪಿ ಮುನಿರತ್ನ ರವರು ಸಾರ್ವಜನಿಕರನ್ನು ಭೇಟಿ ಮಾಡುವ ನಂ. 147/149, 11ನೇ ಕ್ರಾಸ್ ರಸ್ತೆಯಲ್ಲಿರುವ ಗೃಹ ಕಛೇರಿಗೆ, ಸಾಕ್ಷಿ-4 ಚೆಲುವರಾಜು ಹಾಗೂ ಇವರ ಜೊತೆಯಲ್ಲಿ ಸಾಕ್ಷಿ-7 ರಾಮಚಂದ್ರು, ಸಾಕ್ಷಿ-10 ಅರುಣ್‌ಕುಮಾರ್ ರವರುಗಳು ಬೆಳಿಗ್ಗೆ 9-45 ಗಂಟೆಗೆ ಹೋಗಿದ್ದು, ಆರೋಪಿ ಶಾಸಕರಾದ ಮುನಿರತ್ನ ರವರು ಸಾಕ್ಷಿ-4 ಚೆಲುವರಾಜು ರವರನ್ನು ತಮ್ಮ ಗೃಹ ಕಛೇರಿ ಕೊಠಡಿಗೆ ಕರೆಯಿಸಿಕೊಂಡು ಅವಾಚ್ಯ ಶಬ್ದಗಳಿಂದ ನಿಂದಿಸಿ ಕಛೇರಿಯ ಬಳಿ, ಕಛೇರಿಯ ಇತರೆ ಕೊಠಡಿಯಲ್ಲಿ ಸೇರಿದ್ದ ಸಾರ್ವಜನಿಕರಿಗೆ ಹಾಗೂ ಕಛೇರಿಯಲ್ಲಿ ಹಾಜರಿದ್ದ ಸಾಕ್ಷಿ-7 ರಾಮಚಂದ್ರು, ಸಾಕ್ಷಿ-10 ಅರುಣ್ ಕುಮಾರ್ ರವರಿಗೆ ಕೇಳಿಸುವಂತೆ ಏರುಧ್ವನಿಯಲ್ಲಿ ಸಾಕ್ಷಿ-1 ವೇಲುನಾಯಕರ್ ರವರನ್ನು ಉದ್ದೇಶಿಸಿ ಜಾತಿನಿಂದನೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ ಸಾಕ್ಷಿ-4 ರವರಿಗೂ ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿರುತ್ತಾರೆ ಹಾಗೂ ಸಾಕ್ಷಿ-4 ರವರ ಸಮಕ್ಷಮ "ಒಕ್ಕಲಿಗ ಜನಾಂಗದ ಮತ್ತು ಪರಿಶಿಷ್ಟ ಜಾತಿಗಳ ನಡುವೆ ಜಾತಿ ವೈಷಮ್ಯ" ಉಂಟಾಗುವ ರೀತಿಯಲ್ಲಿ ಆರೋಪಿ ಶಾಸಕರಾದ ಮುನಿರತ್ನ ರವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿರುವುದು ತನಿಖಾ ಸಮಯದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ. ಆರೋಪಿಯು, ಸಾಕ್ಷಿ-01 ರವರನ್ನು ಉದ್ದೇಶಿಸಿ ಜಾತಿ ನಿಂದನೆ ಮಾಡಿರುವ ಬಗ್ಗೆ ಸಾಕ್ಷಿ-04 ಚೆಲುವರಾಜು ರವರು ಸಂಗ್ರಹಿಸಿದ್ದ ಆರೋಪಿ ಶಾಸಕರಾದ ಮುನಿರತ್ನ ರವರದ್ದೆನ್ನಲಾದ ಆಡಿಯೋ ಕ್ಲಿಪ್ಪಿಂಗ್‌ನಲ್ಲಿರುವ ಧ್ವನಿಯು ಆರೋಪಿಯ ಮಾದರಿ ಧ್ವನಿಗೆ ಹೋಲಿಕೆಯಾಗಿರುವ ಬಗ್ಗೆ ಸಾಕ್ಷಿ-25 ಪಲ್ಲವಿ ಎನ್.ಡಿ. ರವರು ನೀಡಿರುವ ತಜ್ಞರ ವರದಿಯಿಂದ ದೃಢಪಟ್ಟಿರುತ್ತದೆ.

ಆದುದರಿಂದ, ಬೆಂಗಳೂರು ನಗರದ ವೈಯಾಲಿಕಾವಲ್ ಪೊಲೀಸ್ ಠಾಣೆ ಮೊ.ಸಂ: 122/2024, ಕಲಂ:3(1)(r), 3(1)(s), 3(1)(u), 3(2)(Va) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ, 1989 ಮತ್ತು ಕಲಂ 153A(1)(a)(b), 504, 506 ಐಪಿಸಿ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಹಾಗೂ ಆರೋಪಿಯನ್ನು ಅಭಿಯೋಗಗೊಳಿಸಲು ಕಲಂ 217 ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (ಕಲಂ 196 ಸಿ.ಆರ್.ಪಿ.ಪಿ) ಪ್ರಕಾರ ಸರ್ಕಾರದ ಪೂರ್ವಾನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:24.02.2025ರ ಪತ್ರದಲ್ಲಿ ಈ ಪ್ರಕರಣದಲ್ಲಿನ ಆರೋಪಿತ ಶಾಸಕರು ವಿಧಾನ ಸಭೆಯ ಹಾಲಿ ಸದಸ್ಯರಾಗಿರುವುದರಿಂದ ಸದರಿಯವರ ವಿರುದ್ಧ ಘನ ನ್ಯಾಯಾಲಯದಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಲು ಹಾಗೂ ಮಾನ್ಯ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಮಂಜೂರಾತಿ ನೀಡುವ ಕುರಿತು ನಿಯಮಾನುಸಾರ ಸೂಕ್ತ ಕ್ರಮ ವಹಿಸುವಂತೆ ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯ, ರವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ದಿನಾಂಕ: 19.04.2025ರ ಪತ್ರದಲ್ಲಿ ಕಾರ್ಯದರ್ಶಿಗಳು, ವಿಧಾನ ಸಭಾ ಸಚಿವಾಲಯ ರವರು ಶ್ರೀ ಮುನಿರತ್ನ (ಹಾಲಿ ವಿಧಾನಸಭಾ ಸದಸ್ಯರು) ಅವರನ್ನು ಮಾನ್ಯ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಸನ್ಮಾನ್ಯ ಸಭಾಧ್ಯಕ್ಷರು ಅಭಿಯೋಜನಾ ಮಂಜೂರಾತಿಯನ್ನು ನೀಡಲು ಅನುಮೋದಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಅದರಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 30 ಎಮ್‌ಹೆಚ್‌ಬಿ 2025,**
**ಬೆಂಗಳೂರು, ದಿನಾಂಕ :19/04/2025.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದ ವೈಯಾಲಿಕಾವಲ್ ಪೊಲೀಸ್ ಠಾಣೆ ಮೊ ಸಂ: 122/2024, ಕಲಂ:3(1)(r), 3(1)(s), 3(1)(u), 3(2)(Va) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ, 1989 ಮತ್ತು ಕಲಂ 153A(1)(a)(b), 504, 506 ಐಪಿಸಿ ರೀತ್ಯಾ ದಾಖಲಾಗಿರುವ ಪ್ರಕರಣದ ಆರೋಪಿ ಎ-1 ಮುನಿರತ್ನ @ ಮುನಿರತ್ನಂ ನಾಯ್ಡು, ತಂದೆ ಲೇಟ್ ಸುಬ್ರಹ್ಮಣ್ಯ ನಾಯ್ಡು, 61 ವರ್ಷ, ಹಾಲಿ ಶಾಸಕರು, ರಾಜರಾಜೇಶ್ವರಿ ನಗರ ವಿಧಾನ ಸಭೆ ಕ್ಷೇತ್ರ-154, ವಿಳಾಸ: ನಂ.147, 11ನೇ 'ಎ' ಕ್ರಾಸ್, ವೈಯಾಲಿಕಾವಲ್, ಬೆಂಗಳೂರು-560003 ಇವರ ವಿರುದ್ಧ ಆರೋಪಿಸಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ(ದೌರ್ಜನ್ಯ ತಡೆ) ಕಾಯಿದೆ, 1989 ಕಲಂಗಳು ಮತ್ತು ಇತರೆ ಐಪಿಸಿ ಕಲಂಗಳ ಆರೋಪಗಳೊಂದಿಗೆ ಕಲಂ 153A(1)(a)(b) ಐ.ಪಿ.ಸಿ. ಅಡಿ ಆರೋಪಕ್ಕೆ ಸಂಬಂಧಿಸಿದಂತೆ ಕಲಂ 217 ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (ಕಲಂ 196(1)(a) ಸಿ.ಆರ್.ಪಿ.ಸಿ) ರಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಸರ್ಕಾರವು ಪೂರ್ವಾನುಮತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S. Ambika 19/4/2025
(ಎಸ್.ಅಂಬಿಕಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಅಪರಾಧಗಳು)

19/4/2025

**ಇವರಿಗೆ:**

1. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭಾ ಸಚಿವಾಲಯ, ವಿಧಾನ ಸೌಧ, ಬೆಂಗಳೂರು.
2. ಮಹಾನಿರ್ದೇಶಕರು ಮತ್ತು ಆರಕ್ಷಕಮಹಾನಿರೀಕ್ಷಕರು ಕರ್ನಾಟಕ, ನಂ.2, ನೃಪತುಂಗ ರಸ್ತೆ, ಬೆಂಗಳೂರು.
3. ಪೊಲೀಸ್ ಮಹಾನಿರ್ದೇಶಕರು, ಸಿ.ಐ.ಡಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು.
4. ಪೊಲೀಸ್ ಉಪಾಧೀಕ್ಷರು & ತನಿಖಾಧಿಕಾರಿ, ವಿಶೇಷ ತನಿಖಾ ತಂಡ, ಸಿಐಡಿ, ಕಾರ್ಲಟನ್ ಭವನ, ಬೆಂಗಳೂರು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿ.ಸಿ.ಎ.ಎಸ್), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಜಂಟಿ ಕಾರ್ಯದರ್ಶಿ(ಅಪರಾಧಗಳು, ಸೆರೆಮನೆ & ಸಿನಿಮಾ), ಒಳಾಡಳಿತ ಇಲಾಖೆ ರವರ ಪತ್ರಾಂಕಿತ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು.
3. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.